**36ನೇ ಹೆಚ್ಚುವರಿ ಮಹಾನಗರ ದಂಡಾಧಿಕಾರಿರವರ ನಾಯಾಲಯ, ಬೆಂಗಳೂರು ನಗರ.**

**ಸಿ.ಸಿ. ಸಂಖ್ಯೆಃ 38499/2025**

ಫಿರ್ಯಾದಿಯ ಹೆಸರು : ಶ್ರೀಮತಿ. ತ್ರಿವೇಣಿ ಕಾಲವದ

ವಿರುದ್ಧ

ಆರೋಪಿ ಹೆಸರು : ಶ್ರೀ. ಮೈಲಾರ ಜೋಶಿ

**ದಂಡ ಪ್ರ.ಸಂ.ಕಲಂ.313ರಡಿ ಆರೋಪಿಯ ಹೇಳಿಕೆ**

**ಪ್ರಶ್ನೆ1**: ನೀವು ಈ ಪ್ರಕರಣದಲ್ಲಿ ಫಿರ್ಯಾದಿಯು ನೀಡಿರುವ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೇನೆ

**ಪ್ರಶ್ನೆ2**: ಆರೋಪಿಯಾದ ನೀವು ಪಿರ್ಯಾದಿದಾರರಿಂದ 3.50 ಲಕ್ಷ ರೂ.ಗಳ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲದ ಮರುಪಾವತಿಗಾಗಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಮೇವುಂಡಿ ಬ್ರಾಂಚ್, ಗದಗ, 14.03.2025 ದಿನಾಂಕವಿರುವ 007178 ನಂಬರಿನ ಚೆಕ್ಕನ್ನು ರೂ.3,50,000/- ಮೊತ್ತಕ್ಕೆ ನೀಡಿದ್ದು ಸದರಿ ಚೆಕ್ಕನ್ನು ಪಿರ್ಯಾದಿದಾರರು ನಗದೀಕರಣಕ್ಕೆ ಹಾಜರುಪಡಿಸಿದಾಗ, 'Funds Insufficient' ಎಂಬ ಹಿಂಬರಹದೊಂದಿಗೆ ದಿನಾಂಕ 02.04.2025ರಂದು ಅಮಾನ್ಯಗೊಂಡು ಬ್ಯಾಂಕಿನಿಂದ ಹಿಂದಿರುಗಿಸಲಾಗಿದೆ ಎಂದು ಸಾಕ್ಷಿ ನುಡಿದಿದ್ದಾರೆ. ಈ ಸಂಬಂಧ ನೀವು ಹೇಳುವುದು ಏನಾದರೂ ಇದೆಯೇ?

ಉತ್ತರಃ ಸುಳ್ಳು

**ಪ್ರಶ್ನೆ3**: ಸದರಿ ಚೆಕ್ಕುಗಳು ಅಮಾನ್ಯಗೊಂಡ ನಂತರ ದಿನಾಂಕ 01.05.2025ರಂದು ಅವರು ನಿಮಗೆ ವಕೀಲರ ಮೂಲಕ ಲೀಗಲ್ ನೋಟೀಸ್ ಕಳುಹಿಸಿದ್ದು, ನೋಟೀಸ್ ತಲುಪಿದ 15 ದಿನಗಳ ಒಳಗೆ ನೀವು ಹಣವನ್ನು ಮರುಪಾವತಿ ಮಾಡಲಿಲ್ಲ ಎಂದು ಸಾಕ್ಷ್ಯ ಹೇಳಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ?

**ಉತ್ತರಃ** ಸುಳ್ಳು

**ಪ್ರಶ್ನೆ4**: ನೀವು ಇನ್ನೇನಾದರೂ ಹೇಳಬಯಸುವಿರಾ?

**ಉತ್ತರಃ** ಇಲ್ಲ

**ಪ್ರಶ್ನೆ5**: ನಿಮ್ಮ ಪರ ಸಾಕ್ಷಿಗಳನ್ನು ವಿಚಾರಣೆ ಮಾಡಬಯಸುತ್ತೀರಾ?

**ಉತ್ತರಃ** ಸಾಕ್ಷಿ ವಿಚಾರಣೆ ಮಾಡಿಸುತ್ತೇನೆ.

(ಮೇಲೆ ಹೇಳಿದ ಪ್ರಶ್ನೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ನಾನೇ ಕೇಳಿ ಅವರು ಕೊಟ್ಟ ಉತ್ತರಗಳನ್ನು ಆರೋಪಿ ಹೇಳಿದ ಪ್ರಕಾರ ನಾನೇ ಬರೆದುಕೊಂಡಿರುತ್ತೇನೆಂದು ಈ ಮೂಲಕ ದೃಡೀಕರಿಸಲಾಗಿದೆ.)

**(ಎನ್ ವೈ ರಾವ್)**

ಸ್ಥಳಃ ಬೆಂಗಳೂರು, **36ನೇ ಅ.ಮು.ಮ.ದಂ.**

**ದಿನಾಂಕಃ 09/03/2026** **ಬೆಂಗಳೂರು.**